International Journal of Kannada Research
www.kannadajournal.com

**ISSN: 2454–5813**
IJKR 2023; 9(1): 256-258
© 2023 IJKR
www.kannadajournal.com
Received: 07-01-2023
Accepted: 10-02-2023

**ಡಾ. ನಾಗೇಶ್ ಆರ್**
ಉಪನ್ಯಾಸಕರು, ಕನ್ನಡ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ನಾಗೇಶ್ ಆರ್**
ಉಪನ್ಯಾಸಕರು, ಕನ್ನಡ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಕರ್ನಾಟಕ, ಭಾರತ

# ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಚಿಂತನೆಗಳು

**ಡಾ. ನಾಗೇಶ್ ಆರ್**

**ಪೀಠಿಕೆ**

ಮಧ್ಯಕಾಲೀನ ಕಾಲಘಟ್ಟದಲ್ಲಿ ಸಮಾಜ ಮತ್ತು ಧಾರ್ಮಿಕ ವೈವಿಧ್ಯಗಳ ನಡುವೆಯೂ ಹೊರಹೊಮ್ಮಿದ ಕನ್ನಡ ಸಾಹಿತ್ಯ ವಚನ ಸಾಹಿತ್ಯವಾಗಿದೆ. ಈ ಸಂದರ್ಭದಲ್ಲಿ ವೈದಿಕ ಜೈನ, ವೀರಶೈವ ಮತಗಳಲ್ಲಿ ವಿಶ್ಲೇಷಣೆಯನ್ನು ಕೈಗೊಂಡಿದ್ದು, ವೀರಶೈವ ಮತದೊಂದಿಗೆ ಇತರ ಮತಗಳನ್ನು ಸಾಮ್ಯತೆ ಮತ್ತು ಸಂಘರ್ಷದ ನೆಲೆಗಳನ್ನು ಕಂಡುಕೊಳ್ಳಲಾಗಿದೆ. ಇದರ ಜೊತೆಯಲ್ಲಿ ಜನರ ಮನಸ್ಸಿನ ಆಳದಲ್ಲಿ ಬೇರೂರುವ ದೇವರು ಎಂಬುದರ ಬಗೆಗಿನ ನಂಬಿಕೆ ಆಚರಣೆಗಳನ್ನು ವೈಚಾರಿಕವಾಗಿ ಗ್ರಹಿಸುವುದು ಒಂದು ಸವಾಲೇ ಆಗಿತ್ತು ಎಂಬುದು ವಚನಗಳ ಅಧ್ಯಯನದಿಂದ ತಿಳಿದುಬರುತ್ತಾರೆ.

ವಚನಕಾರರು ಪರಸ್ಪರ ಜೊತೆಯಲ್ಲಿದ್ದುಕೊಂಡೇ ತನ್ನ ಭಿನ್ನವಾದ ಸಾಧನೆಯ ಮೂಲಕ ವಿಶಿಷ್ಟವಾದ ವ್ಯಕ್ತಿತ್ವ ಮತ್ತು ಆಧ್ಯಾತ್ಮಿಕತೆಯನ್ನು ನಿರ್ಮಿಸಿದ್ದಾರೆ. ತನ್ನ ಸಮಕಾಲೀನದಿಂದಲೇ ಮನದುಂಬಿಸಿಕೊಂಡು, ಮಧ್ಯಕಾಲೀನ ಕವಿಗಳನ್ನು ಆಕರ್ಷಿಸಿ ಕಾವ್ಯಲೋಕಕ್ಕೆ ಅಡಿಇಟ್ಟ ಮೊಟ್ಟಮೊದಲ ಸ್ವತಂತ್ರ ಬರಹಗಾರರಾಗಿ ರೂಪುಗೊಂಡಿದ್ದಾರೆ. ವರ್ತಮಾನದ ಸಂದರ್ಭದಲ್ಲಿ ಸ್ತ್ರೀಪರವಾದ ಚಿಂತನೆಗಳು ಗಟ್ಟಿಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಂಘರ್ಷ ಪೂರಿತವಾದ ಬದುಕನ್ನು ವಚನಗಳ ಮೂಲಕ ಮರುಚಿಂತನೆಗೆ ಒಳಗು ಮಾಡಿರುವ ವಚನಕಾರರನ್ನು ಕಾಣಬಹುದು.

ಶರಣರು ಮೊದಲು ಸಮಾಜವನ್ನು ಕಟ್ಟಲು ಧರ್ಮ ತಳಹದಿಯಾಗಬೇಕೆಂದು ಚಿಂತಿಸಿದರು. ಅದುವರೆಗೂ ಅಗಮ್ಯವಾಗಿದ್ದ ಧರ್ಮಾಚರಣೆ ಅತ್ಯಂತ ಕಠಿಣವಾಗಿತ್ತು. ಸಾಮಾನ್ಯ ಜನರಿಂದ ಅನುಸರಿಸಲು ಸಾಧ್ಯವಿಲ್ಲದಷ್ಟು ಕಟ್ಟುಪಾಡುಗಳಿದ್ದವು. ವೈದಿಕಶಾಹಿಯ ಕಪಿಮುಷ್ಠಿಯಲ್ಲಿ ನಲುಗಿಹೋಗಿತ್ತು. ಅಂತಹ ಸಂದರ್ಭದಲ್ಲಿ ಧಾರ್ಮಿಕ ಕ್ಷೇತ್ರವನ್ನು ಶುದ್ಧೀಕರಿಸುವ ಕಾಯಕಕ್ಕೆ ಶರಣರು ಮುಂದಾದರು. ಅವರಲ್ಲಿ ಮುಖ್ಯವಾದವರು ಬಸವಣ್ಣ. ಜನರಾಡುವ ಭಾಷೆಯಲ್ಲಿ ಧರ್ಮದ ತಿರುಳನ್ನು ಉಣಬಡಿಸಿದರು. ಎಲ್ಲರೂ ಆಚರಿಸಬಹುದಾದಂತಹ ಸರಳ ಸ್ವಾತಂತ್ರ್ಯಧರ್ಮ ಶರಣರದಾಗಿತ್ತು. ಇಲ್ಲಿ ಅಸಮಾನತೆಗೆ ಅವಕಾಶವಿರಲಿಲ್ಲ. ಬಾಲ್ಯದಲ್ಲಿಯೇ ಬಸವಣ್ಣನವರು ಉಪನಯನ ಮಾಡುವಾಗ ನನ್ನ ಅಕ್ಕನಿಗೂ ಜನಿವಾರ ಧರಿಸಿರಿ ಎಂದಾಗ, ಅವಳು ಜನಿವಾರ ಧರಿಸಲು ಅರ್ಹಳಲ್ಲ ಎಂಬ ಉತ್ತರದಿಂದ ಸಿಡಿದಿದ್ದೆ "ಕರ್ಮಲತೆಯಂತಿದ್ದ ಜನಿವಾರಂ ಬಿಸುಟು" ನನ್ನಕ್ಕನನ್ನು ಸಮಾನವಾಗಿ ಕಾಣದ ಧರ್ಮದ ಗೊಡವೆ ಎನಗೇಕೆಂದು, ಸ್ತ್ರೀ ಸಮಾನತೆ ಇರುವ ಧರ್ಮ ಬೇಕೆಂಬ ಬಸವಣ್ಣನವರ ತುಡಿತವೇ ವರ್ಗ, ವರ್ಣ, ಲಿಂಗ, ಅಸಮಾನತೆ ಇಲ್ಲದ ಸ್ವತಂತ್ರ ಶರಣ ಧರ್ಮ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿತು. ಸಮಾಜದ ವ್ಯಕ್ತಿಗಳಿಂದ ಕೂಡಿದ್ದು, ಸಮಾಜದ ಉದ್ಧಾರವೆಂದರೆ ವ್ಯಕ್ತಿಗಳ ಉದ್ಧಾರ ಪ್ರತಿಯೊಬ್ಬರ ನೆಟ್ಟಗೇ ನೇರಗೆ ಅಂದಂತೆ ಅವರವರ ಮನೆಯ ದೀಪವನ್ನು ಅವರವರೇ ಹಚ್ಚಿಕೊಂಡರೆ ಯಾರೂ ಯಾರ ಮನೆಯ ದೀಪವನ್ನು ಹಚ್ಚಬೇಕಾಗಿಲ್ಲ. ಅವರ ಮನೆಯ ಕತ್ತಲೆಯ ಗಣಿಯನ್ನಾಗಿ ಮಾಡಿಕೊಳ್ಳದಿರುವ ಬಗ್ಗೆ ಎಚ್ಚರವನ್ನು ಈ ವಚನದಲ್ಲಿ ಕಾಣಬಹುದು.

> "ಲೋಕದ ಡೊಂಕ, ನೀವೇಕೆ ತಿದ್ದುವಿರಿ?
> ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
> ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
> ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ
> ಕೂಡಲ ಸಂಗಮದೇವ

ಪರರ ಚಿಂತನೆ ನಮಗೇಕಯ್ಯಾ
ನಮ್ಮ ಚಿಂತನೆ ನಮಗೆ ಸಾಲದೇ
ಕೂಡಲ ಸಂಗಯ್ಯ ಒಲಿದನೋ
ಬಲ್ಲನೋ ಎಂಬ ಚಿಂತೆ ಹಾಸಲುಂಟು ಹೊಡೆಯಲುಂಟು"

ಬಸವಣ್ಣನವರ ಸಮಾಜಿಕ ಚಿಂತನೆ ಮುಂದುವರಿದು ಸಮಾಜದಲ್ಲಿ ಬೇರೂರಿದ್ದ ಅಸಮಾನತೆಯ ನಿವಾರಣೆಯ ಕಡೆಗೆ ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸುತ್ತಾರೆ.

"ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಥಮರಾಣೆ
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲ ಸಂಗಮದೇವ"

ಅಗತ್ಯಕ್ಕೆ ಮೀರಿದ ವಸ್ತು, ಒಡವೆಗಳನ್ನು ಆಸೆಯಿಂದಲೋ, ಭವಿಷ್ಯದ ದೃಷ್ಟಿಯಿಂದಲೋ ಸಂಗ್ರಹಿಸುವುದು ಸಮಾಜಿಕ ತಾರತಮ್ಯಗಳಿಗೆ ಕಾರಣವಾಗುತ್ತದೆ. ಸ್ವಾರ್ಥ ಬೆಳೆಯುತ್ತದೆ. ಇನ್ನೊಬ್ಬರನ್ನು ಕಸಿದುಕೊಳ್ಳುವ ಮಾರ್ಗ ಸಲ್ಲದು, ಸಂಪತ್ತಿನ ಸಂಗ್ರಹದಿಂದ ಕಳ್ಳತನಕ್ಕೆ ದಾರಿಯಾಗಿ ಸಾಮಾಜಿಕ ಕೇಡು ಸಂಭವಿಸುತ್ತದೆ.
ಲೌಕಿಕ, ಆಧ್ಯಾತ್ಮಿಕ ಚಿಂತನೆಯನ್ನು ಅಂತರಂಗ, ಬಹಿರಂಗದ ಪರಿಕಲ್ಪನೆಯನ್ನು ಸ್ವರ್ಗ-ನರಕದ ಚಿಂತನೆಗಳನ್ನು ಅವರದೇ ರೀತಿಯಲ್ಲಿ ತಮ್ಮ ವಚನಗಳಲ್ಲಿ ಹೇಳಿರುವುದು ವಿಶೇಷವಾಗಿದೆ.

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವರು ಅಲ್ಲಿಯು ಸಲ್ಲುವರಯ್ಯ
ಇಲ್ಲಿ ಸಲ್ಲದವರೆಲ್ಲಿಯೂ ಸಲ್ಲರಯ್ಯಾ
ಕೂಡಲ ಸಂಗಮನದೇವಯ್ಯ"

ಮನುಷ್ಯನ ಕಲ್ಪನೆಗಳಲ್ಲಿ ಸ್ವರ್ಗ-ನರಕಗಳ ಪರಿಕಲ್ಪನೆ ತುಂಬಾ ವಿಶೇಷಣವಾದುದು. ದೇವಲೋಕ ಎನ್ನುವುದು ಸದಾಚಾರ ಸಂಪನ್ನವಾದುದು, ಅದನ್ನು ಪಡೆಯಬೇಕಾದರೆ ಇಹಲೋಕದಲ್ಲಿ ಅಂದರೆ ಲೌಖಿಕ ಜೀವನದಲ್ಲಿ ಮಾನವ ಉತ್ತಮ ಜೀವನಕ್ರಮವನ್ನು ಅಳವಡಿಸಿಕೊಳ್ಳಬೇಕು ಎನ್ನುತ್ತಾರೆ.
ಚಿಂತೆ ಮನಸ್ಸಿನಲ್ಲಿ ಹುಟ್ಟುತ್ತದೆ. ಮನಸ್ಸಿನಿಂದ ಭಾವದವರೆಗೂ ಒಂದೇ ಚಿಂತೆ ನನ್ನನ್ನು ವ್ಯಾಪಿಸಿದೆ. ಹಾಸುವುದಕ್ಕೂ ಹೊದೆಯುವುದಕ್ಕೂ ಸಾಕಾಗುವಷ್ಟು ಆ ಚಿಂತೆ ಆವರಿಸಿದೆ ಎಂದು ತಿಳಿಯ ಹೇಳಿ, ಸಪ್ತ ಸೂತ್ರಗಳನ್ನು ಹೇಳಿ ಬಹಿರಂಗದ ಮರೆತವನ್ನು ಅಂತರಂಗ ಶುದ್ಧಿಯ ಜೊತೆಯಾಗಿ ಸಮಾಜಿಕ ಚಿಂತನೆಯನ್ನು ತಿಳಿ ಹೇಳಿದ್ದರು.

"ಕಳ್ಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದರಿ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ"

ಮಾನವರ ಮನಃಶುದ್ಧಿಗೆ ಮೊದಲು ಮನ್ನಣೆ ಕೊಡಬೇಕೆಂದು ಹೇಳಿದ ಬಸವಣ್ಣ ಸ್ವಧರ್ಮೀಯರೆನ್ನದೆ ಪರಧರ್ಮೀಯರೆನ್ನದೆ ತಪ್ಪಿತಸ್ಥರನ್ನೆಲ್ಲ ತಿದ್ದಿದರು.

ಶೂದ್ರರಾದ ರೈತಾಪಿಜನರು, ಕಾಯಕ ಜೀವಿಗಳು, ಮಹಿಳೆಯರು ಮತ್ತು ಪಂಚಮರು ಈ ದೇಶದಲ್ಲಿ ಸಹಸ್ರಾರು ವರ್ಷಗಳಿಂದ ಮನುಧರ್ಮದ ಪುರುಷ ಪ್ರಧಾನರಾದ ವರ್ಣವ್ಯವಸ್ಥೆಯಿಂದಾಗಿ ಪಡಬಾರದ ಕಷ್ಟಪಟ್ಟಿದ್ದಾರೆ. ಮೇಲ್ವರ್ಗ ಮತ್ತು ಮೇಲ್ಜಾತಿಯ ಅನುತ್ಪಾದಕ ಪುರುಷರಿಗಾಗಿಯೇ ಬದುಕಿನ ಎಲ್ಲ ಸುಖಭೋಗಗಳು ಮೀಸಲಾಗಿದ್ದವು. ಈ ಅಸಮಾನತೆಯ ಅನ್ಯಾಯದ ವಿರುದ್ಧ ಸಿಡಿದೆದ್ದರು.

"ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಷನ ಮುಕ್ತಿಗೆ
ನಿಲುವೊಂದೆ ಕೂಡಲ ಸಂಗಮದೇವ ನಿಮ್ಮನರಿದವಂಗೆ"

ಭಾರತದಲ್ಲಿ ವಿವಿಧ ಜಾತಿಗಳ ಕಾಯಕ ಜೀವಿಗಳ ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ. ಅವರೆಲ್ಲ ತಮ್ಮ ಕಾಯಕಗಳ ಹೆಸರನ್ನು ಅಭಿಮಾನದಿಂದ ಉಳಿಸಿಕೊಂಡರು. ಹೀಗೆ ಶರಣರಲ್ಲಿ ಸಮಗಾರ, ಮಾದಾರ ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳ ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಉಳಿದವು. ಎಲ್ಲರೂ ತಮ್ಮ ನಿತ್ಯಕರ್ಮ ಮತ್ತು ಪೂಜೆ ಪುರಸ್ಕಾರಕ್ಕೆ ಉಪಯೋಗಿಸುವ ನೀರು ಒಂದೇ ಆಗಿರುವಾಗ, ಪಂಚಮರು ವಾಸಿಸುವುದು, ದೇವಾಲಯ ನಿರ್ಮಿಸಿರುವುದು ಒಂದೇ. ಭೂಮಿಯ ಮೇಲೆ ಅಂದಮೇಲೆ ಆ ಜಾತಿ, ಈ ಜಾತಿ, ಮೇಲು-ಕೀಳೆಂಬ ಭಾವ ಸಲ್ಲದು. ಈ ಸೃಷ್ಟಿಯಲ್ಲಿರುವ ಗಾಳಿ, ಬೆಳಕು, ನೀರು ಎಲ್ಲರಿಗೂ ಒಂದೇ ಎಂಬ ಸಾಮಾಜಿಕ ಸತ್ಯವನ್ನು ಪ್ರಕೃತಿಯ ನಿಯಮವನ್ನು ಬಸವಣ್ಣ ತಿಳಿಸಿದ್ದಾರೆ.
"ಬಸವಣ್ಣನವರ ವಚನಗಳು ಹಿಂದೂ ಧಾರ್ಮಿಕ ಸಾಮಾಜಿಕ ವ್ಯವಸ್ಥೆಯ ರೂಪಿಸಿದ್ದು, ಶುದ್ಧ -ಅಶುದ್ಧತೆಯ ಕಲ್ಪನೆಯನ್ನು ನಿರಾಕರಿಸುತ್ತದೆ. ಶಾಶ್ವತ ಅಶುದ್ಧತೆಯ ಒತ್ತಾಯಗಳಿಂದ ಸಾಮಾಜಿಕವಾಗಿ ಬಳಸಲಾಗದ ವರ್ಗವಾಗಿದ್ದು ಹಿಂದುಳಿದವರ ಬಗ್ಗೆ ಹೊಸ ಕಾಳಜಿಯನ್ನು ಬಸವಣ್ಣವರ ವಚನಗಳಲ್ಲಿ ಕಾಣಬಹುದು. ಹುಟ್ಟಿ ಕಾರಣವಾಗಿ ಜಾತಿ ಅಸ್ಪೃಶ್ಯತೆಯ ಮಿತಿಗಳಿಗೆ ಒಳಗಾಗುತ್ತಿದ್ದ ಸ್ಥಾನದ ಹಾಗೂ ಕಠೋರ ನಿಯಮಗಳನ್ನು ಇಲ್ಲಿ ತಿರುಗು ಮುರುಗಾಗುತ್ತದೆ" (ವೀರಶೈವಧರ್ಮ ದರ್ಶನ, ಡಾ.ಯು.ಆರ್. ಅನಂತಮೂರ್ತಿ, ಪು. 295) ದಾರ್ಶನಿಕ ನಿಲುವಿನಲ್ಲಿ ನಿಂತು ಅವರ ಒಳಿತಿಗಾಗಿ ತಮ್ಮನ್ನು ಅರ್ಪಿಸಿಕೊಂಡವರು. ಅದಕ್ಕಾಗಿ ನಿರಂತರವಾಗಿ ದುಡಿದವರು. ಅತ್ಯಂತ ಸರಳವಾದ ಮಾತುಗಳಲ್ಲಿ ಚಮತ್ಕಾರ ರೂಪವಾದ ಅಭಿವ್ಯಕ್ತಿಯಲ್ಲಿ ಅದನ್ನು ಹಿಡಿದಿಟ್ಟಿರುವುದು ಅವರ ವಚನಗಳ ಅಪೂರ್ವ ಸಾಧನೆಯಾಗಿದೆ.
ನಮ್ಮ ಸಮಾಜದಲ್ಲಿ ಬೇರೂರಿದ್ದ ಮೌಢ್ಯತೆಯನ್ನು ತೊಲಗಿಸುವ ಚಿಂತನೆಯನ್ನು ಬಸವಣ್ಣನವರ ವಚನಗಳಲ್ಲಿ ಕಾಣುತ್ತೇವೆ. ಮೌಢ್ಯ ವಿರೋಧಿ ಧೋರಣೆಯನ್ನು ಸಮಾಜಿಕ ಚಿಂತನೆಗಳ ನೆಲೆ ಗಟ್ಟಿನಲ್ಲಿ ತಿಳಿಯಾಗಿ ಹೇಳುತ್ತಾರೆ.

"ಮಡಕೆ ದೈವ, ಮಾರದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ !
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ
ದೈವ ದೈವವೆಂದು ಕಾಲಿಡಲಿಂಬಿಲ್ಲ,

ದೈವನೊಬ್ಬನೆ ಕೂಡಲ ಸಂಗಮದೇವಾ"

ಮೂಢನಂಬಿಕೆಯ ಅಗಾಧತೆಯನ್ನು, ದೇವರ ಹೆಸರಲ್ಲಿ ಕಂಡ ಕಂಡದಕ್ಕೆಲ್ಲಾ ಕೈ ಮುಗಿಯುವ ಮೂರ್ಖತನದ ಪರಮಾವಧಿ ಸಲ್ಲದು. ವಿಚಾರವಿಲ್ಲದ ಆಚಾರ ಅರ್ಥಹೀನವಾದುದು. ಮಡಿಕೆ, ಮೊರ, ಬೀದಿಯ ಕಲ್ಲು, ಹಣಿಗೆ ಬಿಲ್ಲಿನ ಹಗ್ಗ, ಕೊಳಗ, ಗಿಣ್ಣಿಲು ಇವನ್ನೇ ದೇವರೆಂದು ಪೂಜಿಸುವುದು ಎಂಥ ಮೂರ್ಖತನ, ಮೌಢ್ಯ ರಹಿತವಾದ ವಿಚಾರವತರಾದ ಒಂದು ಜನ ಸಮುದಾಯವನ್ನು ರೂಪಿಸುವ ಗುರುತರವಾದ ಕಾರ್ಯವನ್ನು ಬಸವಣ್ಣನವರು ಮಾಡಿದರು. ತಾವು ರೂಪಿಸಬೇಕೆಂದಿರುವ ಸಮಾಜದ ದೋಷಗಳನ್ನು ನಿವಾರಿಸಲು, ಸಾಧ್ಯವಾದಷ್ಟು ವಿಚಾರವಂತಿಕೆಯನ್ನು ಸಮಾಜಕ್ಕೆ ತಿಳಿಹೇಳುವ, ಚಿಂತಿಸುವ ಬಗ್ಗೆ, ಬದಲಾವಣೆಯನ್ನು ತರಲು ಪ್ರಯತ್ನಿಸಿದರು.

ವ್ಯಕ್ತಿಗೆ ಒಂದು ಮುಖವಾದರೆ ವ್ಯಕ್ತಿತ್ವಕ್ಕೆ ಹಲವು ಮುಖಗಳು ಬಸವಣ್ಣನವರ ಬಹುಮುಖಿ ವ್ಯಕ್ತಿತ್ವದ ಮರೆತ ಮಾನವರನ್ನು ಎಚ್ಚರಿಸಿದ ಅರಿತ ಶರಣರ ಶ್ರೇಷ್ಠ ಜೀವನದ ಜೀವಂತ ಕೈಪಿಡಿ, ಸರ್ವ ಸಮಾನತೆ, ಜಾತಿ, ಲಿಂಗ ಹಾಗೂ ವೃತ್ತಿಭೇದ ನಿರಾಕರಣೆ ಕಾಯಕತ್ವ ಪ್ರತಿಪಾದನೆ, ಮಹಿಳೆಯ ಉನ್ನತಿ ಸಮಾಜಿಕ ಸಂಸ್ಕರಣೆಯ ಸಂಘಟನೆ ಹಾಗೂ ಸುಧಾರಣೆಗಳನ್ನು ಕ್ಷೇತ್ರ ಕಾಲಾವಧಿಯಲ್ಲಿ ಮಾಡಿದ ಮಹಾಪುರುಷ, ಸ್ವಾತಂತ್ರ್ಯ, ಸರ್ವಸಮಾನತೆ, ಭ್ರಾತೃತ್ವ ಸಮಾಜಿಕ ಚಿಂತನೆಗಳು, ಆದರ್ಶ ಸಮಾಜ ಮೌಲ್ಯಗಳು ಎನ್ನಬಹುದು. ವರ್ಣ ನಿರ್ಮೂಲನೆ, ಕಾಯಕಕ್ಕೆ ಮಹತ್ವ ಸುಳ್ಳು, ಮೋಸ, ಮಡಿ, ವಾರಗಳನ್ನು ತೊಡೆದು ಹಾಕುವ ಪ್ರಯತ್ನ ಎದ್ದು ಕಾಣುತ್ತದೆ. ಭಕ್ತಿಗೆ, ದಯೆಗೆ, ವಿನಯಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದನ್ನು ಕಾಣುತ್ತೇವೆ.

ಜಗದ್ವಾಪ್ತಿಯಾದ ಸರ್ವಕಾಲಿಕ ತತ್ವಗಳನ್ನು ಸಾರಿದ ವಿಶ್ವಮಾನವ, ಧಾರ್ಮಿಕ ದೃಷ್ಟಿಯ ನೈತಿಕ ನೆಲೆಗಟ್ಟಿನ ಪರಿಶುದ್ಧ ನಡೆ–ನುಡಿಯ ತ್ಯಾಗ, ಭೋಗ ಸಮನ್ವಯ ದಿವ್ಯ ಜೀವನ ಸಾಗಿಸಿದ ಜಗಜ್ಯೋತಿ, ವಿಶ್ವಪ್ರೇಮ ವಿಶ್ವಬಾಂಧವ್ಯ ಹಾಗೂ ವಿಶ್ವಮೈತ್ರಿಗಳನ್ನು ನಿರ್ಮಿಸಿದ ವಿಶ್ವಭೂತಿ, ಬಸವಣ್ಣನವರ ವ್ಯಕ್ತಿಗತ ಸಾಧನೆಯನ್ನು ಬಿಟ್ಟು ಅವರ ಸಮಾಜ ಬೋಧನೆಯಲ್ಲಿ ಸಮಾಜಿಕ ಚಿಂತನೆಯನ್ನು ಕಾಣಬಹುದು. ಬಸವಣ್ಣನವರು ಮುಗಿಲಿಗೇರಿದರೂ ನೆಲವನ್ನು ಮರೆಯದ ಕಾರಣ ಅವರಿಗೆ ವಚನಕಾರರಲ್ಲಿ ಅಪಾರ ಪ್ರಾಶಸ್ತ್ಯ ದೊರೆತಿದೆ.

**ಪರಾಮರ್ಶನ ಗ್ರಂಥಗಳು**

1. ಡಾ.ಎಲ್. ಬಸವರಾಜು, 2000 ಬಸವಣ್ಣನವರ ವಚನಗಳು, ಗೀತಾಬುಕ್ ಹೌಸ್, ಮೈಸೂರು.
2. ಬಸವಪಥ, 2005 ಬಸವಸಮಿತಿ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು.
3. ಕಲಬುರ್ಗಿ ಎಂ.ಎಂ. 2000 ವಚನ ಸಂಪುಟ, ವಿದ್ಯಾಪ್ರಕಾಶನ, ಧಾರವಾಡ.
4. ಡಾ.ಹೆಚ್. ತಿಪ್ಪೇರುದ್ರಸ್ವಾಮಿ, 1994 ಪ್ರಸಾದ, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.